ಅಸಲು ದಾವಾ ನಂಃ 43/2024
ಪಿ ಡಬ್ಲ್ಯುಃ 1

**ದಿನಾಂಕಃ 01.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

ಮುಖ್ಯವಿಚಾರಣೆಃ ವಾದಿ ಪರ ಶ್ರೀಮತಿ ಪಾರ್ವತಿ ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ನಾನು ಈ ದಿನ ಎಂ ಆರ್ ಸಂಖ್ಯೆ 18/2010-11 ರ ಮ್ಯುಟೇಶನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 1 ಎಂದು, ತಲಮಕ್ಕಿ ಗ್ರಾಮದ ಸರ್ವೆ ನಂಬರ್ 115/5, 115/,115/4,115/3,115/2 ಹಾಗೂ 115/1 ಇವುಗಳ 6 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 2 ರಿಂದ 7 ಎಂದು, ಎಂ ಆರ್ ಸಂಖ್ಯೆ ಪಿ 28 2012-13 ಇದರ ಮ್ಯುಟೇಶನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 8 ಎಂದು, ಮೂಲ ದಾವೆ ಸಂಖ್ೆ 49/2019 ರ ಆದೇಶ ಪುಟ, ಮೆಮೋ, ವಿವಾದಾಂಶ ಹಾಗೂ ಮುಖ್ಯವಿಚಾರಣೆಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 9 ರಿಂದ 12 ಎಂದು, ಸರ್ವೆ ನಂಬರ್ 115/1, 116/1 ಇವುಗಳ 6 ಅಟ್ಲಾಸ್ ನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 13 ರಿಂದ 18 ಎಂದು, ಸರ್ವೆ ನಂಬರ್ 116/1, 116, 115/3 ಹಾಗೂ 115 ಇವುಗಳ 4 ನಮೂನೆ 5 ರ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 19 ರಿಂದ 22 ಎಂದು, ಸರ್ವೆ ನಂಬರ್ 115 ಮತ್ತು 116 ರ ಕರ್ನಾಟಕ ರಿವಿಜನ್ ಸೆಟಲ್ಮೆಂಟ್ ಆಕಾರ್ ಬಂದ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 23 ಎಂದು, ತಲಮಕ್ಕಿ ಗ್ರಾಮದ ಗ್ರಾಮ ನಕಾಶೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 24 ಎಂದು, ಸರ್ವೆ ನಂಬರ್ 115/5 ಇದರ ಹದ್ದುಬಸ್ತು ನಕ್ಷೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 25 ಎಂದು, ಹೇಳಿಕೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 26 ಎಂದು, ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 27 ಎಂದು, ದಿನಾಂಕ 20.03.2023 ರಂದು ನಮ್ಮ ವಕೀಲರ ಮುಖಾಂತರ ಕಳುಹಿಸಿದ ನೋಟೀಸು ಪ್ರತಿಯನ್ನು ಹಾಜರುಪಡಿದ್ದು ಅದನ್ನು ನಿಪಿ- 28 ಎಂದು, ಜಾರಿಯಾಗದೇ ಬಂದ ಅಂಚೆ ಸ್ವೀಕೃತಿ ಪತ್ರವನ್ನು ಈಗ ತೆರೆದ ನ್ಯಾಯಾಲಯದಲ್ಲಿ ನೋಡಲಾಗಿ ಸದರಿ ಅಂಚೆ ಲಕೋಟೆಯನ್ನು ನಿಪಿ- 29 ಎಂದು ಅದರೊಳಗಿದ್ದು ನೋಟೀಸು ಪ್ರತಿಯನ್ನು ನಿಪಿ- 29(ಎ) ಗುರುತಿಸಲಾಯಿತು.

ಅಸಲು ದಾವಾ ನಂಃ 43/2024
ಪಿ ಡಬ್ಲ್ಯುಃ 1

**(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ